## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 190 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.09.2022. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೋಟಗಲ್ ಗ್ರಾಮದ ಸರ್ವೆ ನಂ.11 ರಲ್ಲಿ ಜಿ.ಟಿ.ಬಿ. ಕ್ರಷರ್ಸ್ ಇವರು ಕಾನೂನು ಬಾಹಿರವಾಗಿ, ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಕೊಂಡು, ಸರ್ಕಾರ ನೀಡಿದ ಮಂಜೂರಾತಿಯ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಗಣಿಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶ್ರೀಮತಿ ಹೆಚ್.ಕೆ ಸಾವಿತ್ರಿ (ಮೆ\|\| ಜಿ.ಟಿ.ಬಿ. ಸ್ಟೋನ್ ಕ್ರಷರ್ಸ್) ರವರಿಗೆ ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೋಟಗಲ್ ಗ್ರಾಮದ ಸರ್ವೆ ನಂ.11 ರ 05-00 ಎಕರೆ ಪ್ರದೇಶದಲ್ಲಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಸಂಖ್ಯೆ 260 ನ್ನು ದಿನಾಂಕ 07.10.2017 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿರುತ್ತದೆ. ಸದರಿ ಕಲ್ಲು ಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ಮಂಜೂರಾತಿಯ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಗಣಿಗಾರಿಕೆ ನಡೆಸಿರುವುದು ಡ್ರೋಣ್ ಸರ್ವೆ ನಡೆಸಿ ವರದಿ ಪಡೆದ ನಂತರ ಇಲಾಖೆಯ ಗಮನಕ್ಕೆ ಬಂದಿರುತ್ತದೆ. |
| ಆ) | ಡ್ರೋಣ್ ಸರ್ವೆ ಮಾಡಿ, ಅಕ್ರಮ ಗಣಿಗಾರಿಕೆ ನಡೆಸಿರುವ ಪ್ರಮಾಣವನ್ನು ಗುರುತು ಮಾಡಲಾಗಿದೆಯೇ; (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | ದಿನಾಂಕ 12.08.2022 ರಂದು ಸದರಿ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ತೆಗೆದಿರುವ ಉಪಖನಿಜದ ಪ್ರಮಾಣವನ್ನು ಅಂದಾಜಿಸಲು ಹಿರಿಯ ಭೂವಿಜ್ಞಾನಿ, ಚಿಕ್ಕಬಳ್ಳಾಪುರ ಕಛೇರಿಯ ತಾಂತ್ರಿಕ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಮಕ್ಷಮದಲ್ಲಿ ಡ್ರೋಣ್ ಸರ್ವೆ ಕಾರ್ಯ ನಡೆಸಲಾಗಿರುತ್ತದೆ. ಡ್ರೋಣ್ ಸರ್ವೆ ಕಾರ್ಯದ ವರದಿಯಂತೆ, ಗುತ್ತಿಗೆ ಪ್ರದೇಶದಲ್ಲಿ 136245 ಮೆಟ್ರಿಕ್ ಟನ್ ಕಟ್ಟಡ ಕಲ್ಲು ತೆಗೆದಿರುವುದು ಕಂಡುಬಂದಿದ್ದು, ಈ ಪೈಕಿ ಗುತ್ತಿಗೆ ಪ್ರದೇಶದ ಮೇಲ್ಭಾಗದಲ್ಲಿ ಸುಮಾರು 13625 ಮೆಟ್ರಿಕ್ ಟನ್ ಶಿಥಿಲ ಗ್ರಾನೈಟ್ ಶಿಲೆ/ಮಣ್ಣಿನ ಒವರ್ ಬರ್ಡನ್ ಆಗಿರುತ್ತದೆ. |

| | | |
|---|---|---|
| | | ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಮಂಜೂರಾದ ದಿನಾಂಕದಿಂದ 80083 ಮೆಟ್ರಿಕ್ ಟನ್ ಪ್ರಮಾಣಕ್ಕೆ ರಾಜಧನ ಪಾವತಿಸಿ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡಿರುವುದು ಆಡಿಟ್ ವರದಿಗಳಿಂದ ಕಂಡುಬಂದಿರುತ್ತದೆ.<br><br>ಗುತ್ತಿಗೆದಾರರು ಸಂಚಿತ ಆಡಿಟ್ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ 42537 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಖನಿಜ ರವಾನೆ ಪರವಾನಗಿ ಪಡೆಯದೆ ನಿಯಮ ಉಲ್ಲಂಘಿಸಿ ಸಾಗಾಣಿಕೆ ಮಾಡಿರುವುದು ಕಂಡುಬಂದಿದ್ದು, ಸದರಿ ಪ್ರಮಾಣಕ್ಕೆ ಪ್ರಸ್ತುತ ಚಾಲ್ತಿಯಲ್ಲಿರುವ ರಾಜಧನ ₹ 70/- ಪ್ರತಿ ಮೆಟ್ರಿಕ್ ಟನ್‌ನಂತೆ 05 ಪಟ್ಟು ದಂಡ ₹1,48,87,950/- ಗಳನ್ನು ವಿಧಿಸಿ, ಪಾವತಿಸುವಂತೆ ಸೂಚಿಸಿ ಗುತ್ತಿಗೆದಾರರಿಗೆ ದಿನಾಂಕ 17.08.2022 ರಂದು ನೋಟೀಸ್ ಜಾರಿ ಮಾಡಿದ್ದು, ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಮುಂದುವರೆದು ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರದಲ್ಲಿನ ಷರತ್ತುಗಳನುಸಾರ 7.5 ಮೀಟರ್ ಮಾರ್ಜಿನ್ ಹಾಗೂ ಬೆಂಚುಗಳನ್ನು ನಿಯಮಬದ್ಧವಾಗಿ ನಿರ್ವಹಿಸದೆ ಗಣಿಗಾರಿಕೆ ನಡೆಸುತ್ತಿರುವುದು ಹಾಗೂ ಸುರಕ್ಷತೆಗಾಗಿ ತಂತಿಬೇಲಿ ನಿರ್ವಹಿಸದಿರುವುದು ಕಂಡುಬಂದ ಹಿನ್ನಲೆಯಲ್ಲಿ ಸದರಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವವರೆಗೆ ಸದರಿ ಗುತ್ತಿಗೆ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲು ಸೂಚಿಸಿ ಗುತ್ತಿಗೆದಾರರಿಗೆ ದಿನಾಂಕ 02.09.2022 ರಂದು ನೋಟೀಸ್ ಜಾರಿ ಮಾಡಲಾಗಿರುತ್ತದೆ. |
| ಇ) | ಈ ಸಂಬಂಧ ಅಧಿಕಾರಿಗಳು ಪದೇಪದೇ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಸಂಬಂಧ ತಪ್ಪು ಮಾಹಿತಿಯನ್ನು ನೀಡಿರುವುದು ಕಂಡುಬಂದಿರುವುದಿಲ್ಲ. |

| | | |
|---|---|---|
| ಈ) | ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸ್ಥಳೀಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವ ತಪ್ಪಿತಸ್ಥ ಅಧಿಕಾರಿ/ನೌಕಕರ ಹಾಗೂ ಕ್ರಷರ್ ಮಾಲೀಕರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಡ್ರೋಣ್ ಸರ್ವೆ ವರದಿಯಂತೆ ಗುತ್ತಿಗೆದಾರರು ಸುಮಾರು 42537 ಮೆಟ್ರಿಕ್ ಟನ್ ನಷ್ಟು ಉಪಖನಿಜವನ್ನು ಹೆಚ್ಚುವರಿಯಾಗಿ ತೆಗೆದು ಸಾಗಾಣಿಕೆ ಮಾಡಿರುವುದು ಕಂಡು ಬಂದಿರುವುದರಿಂದ ಗುತ್ತಿಗೆದಾರರಿಗೆ ನೋಟೀಸ್ ಜಾರಿ ಮಾಡಿ 05 ಪಟ್ಟು ದಂಡ ₹ 1,48,87,950/- ಗಳನ್ನು ಪಾವತಿಸುವಂತೆ ಸೂಚಿಸಲಾಗಿರುತ್ತದೆ. |

ಸಂಖ್ಯೆ ಸಿಐ-ಎಂಎಂಎನ್/349/2022

Halappa BA.

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.